ಸಾಕ್ಷಿಯನ್ನು ದಿನಾಂಕ : 29-09-2021 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ 8 ರ ಪರ ಶ್ರೀ ಎಸ ಎಸ ಡಿ ವಕೀಲರಿಂದ

35. ಬಂಡೆಪ್ಪರವರ ತಂದೆ ಹೆಸರು ನನಗೆ ಗೊತ್ತಿಲ್ಲಾ. ಬಂಡೆಪ್ಪರವರಿಗೆ ಇಬ್ಬರೂ ಗಂಡು ಮಕ್ಕಳು ನನ್ನ ತಂದೆ ಸಾಂಬಾಜೀರಾವ ಹಾಗೂ ಗಣಪತರಾವ ಇಬ್ಬರೂ ಹೆಣ್ಣು ಮಕ್ಕಳು ಗಂಗಮ್ಮಾ ಹಾಗೂ ಕಲ್ಲಮ್ಮಾ ನಮ್ಮ ತಂದಗೆ ಇನ್ನೊಬ್ಬ ಸಹೋದರ ಪುಂಡಲಿಕರವರು ಇದ್ದು ಅವರು ತೀರಿಕೊಂಡಿದ್ದಾರೆ. ಗಂಗಮ್ಮಾರವರ ಈಗ ತೀರಿಕೊಂಡಿದ್ದಾರೆ. ಅವರು 1989-90 ರಲ್ಲಿ ತೀರಿಕೊಂಡಿದ್ದಾರೆ.

ಗಂಗಮ್ಮಾರವರ ಗಂಡನ ಹೆಸರು ಮರೇಪ್ಪಾ ಗಂಗಮ್ಮಾ ಹಾಗೂ ಮರೇಪ್ಪಾರವರಿಗೆ ಶಂಕರ, ಶಿರೋಮಣಿ, ಪಂಡಿತ, ಜಯೇಮ್ಮಾ ಗುಂಡಮ್ಮಾ ಹಾಗೂ ಶೆರಣೆಮ್ಮಾ ಮಕ್ಕಳು ಅಂದರೆ ನಿಜ. ಶಂಕರರವರು ಈಗ ತೀರಿಕೊಂಡಿದ್ದಾರೆ. ಶಂಕರರವರಿಗೆ ಎಶೇಪ್ಪಾ ಸಂಪತ್ತ, ಬಾಸ್ಕರ ಮತ್ತು ಇಂದಮ್ಮಾ ಮಕ್ಕಳು ಅಂದರೆ ಸಾಕ್ಷಿಯು ಅವರ ಬಗ್ಗೆ ನಿಖರವಾಗಿ ಗೊತ್ತಿಲ್ಲಾ ಆದರೆ ಶಂಕರರವರಿಗೆ ಮಕ್ಕಳು ಇದ್ದಾರೆ ಎಂದು ಒಪ್ಪಿಕೊಳ್ಳುತ್ತಾರೆ. ನಾನು ದಾವೆ ಸಲ್ಲಿಸುವಾಗ ಈಶೇಪ್ಪಾರವರು ಪಾರ್ಟಿ ಮಾಡಿರಲಿಲ್ಲಾ ಅಂದರೆ ನಿಜ.

36. ನಾನು ತಿದ್ದುಪಡಿ ವಾದ ಪತ್ರ ಸಲ್ಲಿಸಿದ್ದೆನೆ ಅದರಲ್ಲಿ ಎಶೇಪ್ಪಾರವರನ್ನು ಪ್ರತಿವಾದಿ 8 ಆಗಿ ತೋರಿಸಿದ್ದೆನೆ ಅಂದರೆ ನಿಜ. ನಾನು ಈ ದಿನ ಪ್ರತಿವಾದಿ 8 ರವರ ಪರ ನನ್ನನ್ನು ಪಾರ್ಟಿ ಸವಾಲಿಗೆ ಕರೆಸಿದ್ದಕ್ಕೆ ಸಾಕ್ಷಿ ಹೇಳಲು ಬಂದಿದ್ದೆನೆ. ಪ್ರತಿವಾದಿ 8 ರವರು ಶಂಕರರವರ ಮಗ ಅಂದರೆ ನಿಜ. ದಾವಾ ಅಸ್ತಿ ನಮ್ಮ ಕುಟುಂಬಕ್ಕೆ ಪೂರ್ವಜರಿಂದ ಬಂದಿದೆ. ನಮ್ಮ ಪೂರ್ವಜರಿಗೆ ದಾವಾ ಅಸ್ತಿ ಬಿಟ್ಟು ಇನ್ನೂ ಎರಡು ಮನೆಗಳು ಇದೆ ಅಂದರೆ ನಿಜ. ಸದರಿ ಮನೆಗಳು ನಂಬರ 10–3–18 ಹಾಗೂ 10–3–23 ಅಂದರೆ ನಿಜ. ಸದರಿ ದಾವಾ ಜಮೀನು ಮತ್ತು ಮೇಲೆ ಹೇಳಿದ ಮನೆಗಳು ನಂಬರ 10–3–18 ಹಾಗೂ 10–3–23 ರಲ್ಲಿ ಪಾಲು ಅಗಿಲ್ಲಾ ಅಂದರೆ ನಿಜ. ದಾವಾ ಸರ್ವೆ ನಂ 3 ರ ಒಟ್ಟು ವಿಸ್ತಿರ್ಣ 28 ಎಕರೆ ಇತ್ತು. ಸದರಿ ಒಟ್ಟು ವಿಸ್ತಿರ್ಣದಲ್ಲಿ ಸುಮಾರು 4 ಎಕರೆ ಈಗಾಗಲೆ ಸರಕಾರದವರು ಸ್ವಾಧಿನಕ್ಕೆ ತೆಗೆದುಕೊಂಡಿದ್ದಾರೆ. ಸದರಿ 4 ಎಕರೆ ಜಮೀನಿನ ಕುರಿತು ಎಲ ಎ ಸಿ ನಂ. 129/2006 ಸಲ್ಲಿಸಲಾಗಿತ್ತು ಅಂದರೆ ನಿಜ. ಸದರಿ ಎಲ ಎ ಸಿ ನಂ. 129/2006 ರ ಆವಾರ್ಡ ಹಣ ಹೆಚ್ಚಿಸಲು ಸಲ್ಲಿಸಿದ ಅಫಿಲು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ ಕಲಬುರಗಿರವರಲ್ಲಿ ಚಾಲ್ತಿಯಲ್ಲಿ ಇದೆ ಅಂದರೆ ನಿಜ. ನಾನು ಸದರಿ ಎಲ ಎ ಸಿ ನಂ. 129/2006 ರ ಅರ್ಜಿಯಲ್ಲಿ ಪಾರ್ಟಿ ಇರಲಿಲ್ಲಾ. ಗಣಪತಿರವರ ಹೆಸರಿನಲ್ಲಿ ಸರ್ವೆ 3 ಒಟ್ಟು ವಿಸ್ತಿರ್ಣದಲ್ಲಿ 23 ಎಕರೆ ಚಿಲ್ಲರೆ ಗುಂಟೆ ಒಟ್ಟು ಕುಟುಂಬದ ಪರವಾಗಿ ಗಣಪತಿರವರ ಹೆಸರಿನಲ್ಲಿ ಮಂಜೂರು ಆಗಿತ್ತು

ಅಂದರೆ ನಿಜ. ಸದರಿ ಅಸ್ತಿ ಒಟ್ಟು ಕುಟುಂಬದ ಅಸ್ತಿ ಹಾಗೂ ಬಂಡೆಪ್ಪರವರ ಮಕ್ಕಳಿಗೆ ಅದರಲ್ಲಿ ಪಾಲು ಇದೆ ಅಂದರೆ ಸಾಕ್ಷಿಯು ಬಂಡೆಪ್ಪರವರ ಹೆಣ್ಣು ಮಕ್ಕಳು ಮದುವೆ ಆಗಿದ್ದು ಅವರ ಗಂಡು ಮಕ್ಕಳಿಗೆ ಪಾಲು ಇದೆ ಎಂದು ಹೇಳುತ್ತಾರೆ.

37. ಬಂಡೆಪ್ಪರವರು 1958 ರಲ್ಲಿ ತೀರಿಕೊಂಡಿದ್ದಾರೆ. ಬಂಡೆಪ್ಪರವರ ಹೆಣ್ಣು ಮಕ್ಕಳು ಗಂಗಮ್ಮಾ, ಕಲ್ಲಮ್ಮಾರವರ ಮದುವೆ ಯಾವ ವರ್ಷದಲ್ಲಿ ಆಗಿದೆ ನನಗೆ ಗೊತ್ತಿಲ್ಲಾ. ಬಂಡೆಪ್ಪರವರು ತಮ್ಮ ಜಿವಂತಕಾಲದಲ್ಲಿ ತಮ್ಮ ಅಸ್ತಿಗಳ ಕುರಿತು ಯಾವುದೇ ದಾಖಲೆ ಬರೆದು ಅಸ್ತಿಗಳ ಬಗ್ಗೆ ಹಂಚಿಕೆ ಮಾಡಿರಲಿಲ್ಲಾ. ಬಂಡೆಪ್ಪರವರ ಹೆಣ್ಣು ಮಕ್ಕಳಿಗೂ ಪಾಲು ಇದೆ ಅಂದರೆ ಸಾಕ್ಷಿಯು ಈಗ ಕಾನೂನು ಬದಲಾಗಿದ್ದು ಬಂಡೆಪ್ಪರವರ ಹೆಣ್ಣು ಮಕ್ಕಳಿಗೂ ಪಾಲು ಇದೆ ಎಂದು ಒಪ್ಪಿಕೊಳ್ಳುತ್ತಾರೆ. ನಾನು ಉದ್ದೇಶ ಪೂರ್ವಕವಾಗಿ ಬಂಡೆಪ್ಪರವರ ಹೆಣ್ಣು ಮಕ್ಕಳ ವಾರಸುದಾರರಿಗೆ ಈ ದಾವೆಯಲ್ಲಿ ಸೇರಿಸಿರಲಿಲ್ಲಾ ಅಂದರೆ ಸಾಕ್ಷಿಯು ಸದರಿರವರು ಅಸ್ತಿಗಳಲ್ಲಿ ಹಕ್ಕು ಕೇಳಿರಲಿಲ್ಲಾ ಅದ್ದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲಾ ಎಂದು ಹೇಳುತ್ತಾರೆ. ಲ್ಯಾಂಡ ಟ್ರಿಬುನಲನಲ್ಲಿ ನಡೆಯುತ್ತಿರುವ ಪ್ರಕ್ರಿಯೇಯಲ್ಲಿ ಗಣಪತರವರು ತೀರಿಕೊಂಡಿದ್ದು ಅವರ ಹೆಂಡತಿ ವಾರಸುದಾರರು ಎಂದು ಅವರನ್ನು ಸದರಿ ಲ್ಯಾಂಡ ಟ್ರಿಬುನಲನಲ್ಲಿ ನಡೆಯುತ್ತಿದ್ದ ಪ್ರಕ್ರಿಯೇಯಲ್ಲಿ ಸುಂದರಮ್ಮಾರವರನ್ನು ಪಾರ್ಟಿ ಮಾಡಲಾಗಿತ್ತು ಅಂದರೆ ನಿಜ. ಪ್ರತಿವಾದಿ 1 ರವರು ತಮ್ಮ ಹೆಸರು ದಾವಾ ಅಸ್ತಿಯ ದಾಖಲೆಯಲ್ಲಿ ನಮೊದು ಅಗಿದ್ದರಿಂದ ಅವರು ಪ್ರತಿವಾದಿ 4 ಮತ್ತು 5 ರವರಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಅಂದರೆ ಸಾಕ್ಷಿಯು ಸದರಿ ವಿಚಾರ ತಿಳಿದುಕೊಂಡ ನಂತರ ನಾನು ಈ ದಾವೆಯನ್ನು ಸಲ್ಲಿಸಿದ್ದೆನೆ ಎಂದು ಹೇಳುತ್ತಾರೆ. ನಾನು ಈ ದಾವೆಯಲ್ಲಿ ಪ್ರತಿವಾದಿ 1 ರವರು ಪ್ರತಿವಾದಿ 4 ಮತ್ತು 5 ರವರಿಗೆ ಬರೆದುಕೊಟ್ಟ ಖರೀದಿ ಕರಾರು ಪತ್ರ ರದ್ದು ಗೊಳಿಸಲು ಕೇಳಿಕೊಂಡಿಲ್ಲಾ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ.

38. ದಾವಾ ಆಸ್ತಿಯ ಪಹಣಿಯಲ್ಲಿ ಪ್ರತಿವಾದಿ 1 ರಿಂದ 3 ರವರ ಹೆಸರು

ದಾಖಲು ಆಗಿತ್ತು. ಪ್ರತಿವಾದಿ 4 ಮತ್ತು 5 ರವರ ಹೆಸರು ಖರೀದಿ ಕರಾರು ಪತ್ರದ ಆದರದ ಮೇರೆಗೆ ದಾವಾ ಅಸ್ತಿಯ ಪಹಣಿಯಲ್ಲಿ ದಾಖಲು ಆಗಿಲ್ಲಾ. 2012 ರಿಂದ ದಾವಾ ಅಸ್ತಿಯ ಸ್ವಾಧಿನ ಪ್ರತಿವಾದಿ 1 ರವರು ಹೊಂದಿದ್ದಾರೆ. ಪ್ರತಿವಾದಿ 1 ರವರು ಪ್ರತಿವಾದಿ 4 ಮತ್ತು 5 ರವರಿಂದ ಸುಮಾರು ತಲಾ 20 ಲಕ್ಷ ರೂ. ಪಡೆದು ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದಾರೆ. ಶೆಂಕರೆಪ್ಪಾರವರು ಸದರಿ ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿಲ್ಲಾ ಅಂದರೆ ನಿಜ. ದಾವಾ ಅಸ್ತಿಯಲ್ಲಿ ಎಶೇಪ್ಪಾರವರಿಗೂ ಪಾಲು ಇದೆ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಎಶೇಪ್ಪಾರವರಿಗೂ ಸರಕಾರದವರು ಸ್ವಾಧಿನ ಪಡಿಸಿಕೊಂಡು ಕೊಟ್ಟ ಪರಿಹಾರದ ಹಣದಲ್ಲಿ ಪಾಲು ಇದೆ ಅಂದರೆ ಸರಿಯಲ್ಲ. ಸದರಿ ಸ್ವಾಧಿನ ಪಡಿಸಿಕೊಂಡ ಜಮೀನಿನ ಎಲ ಎ ಸಿ ನಂ. 129/2006 ರಲ್ಲಿ ನಾನು ಪಾರ್ಟಿ ಇಲ್ಲಾ. ಪ್ರತಿವಾದಿ 1 ರವರು ಯಾವ ದಾಖಲೆಯ ಆದಾರದ ಮೇರೆಗೆ ಪ್ರತಿವಾದಿ 2 ಮತ್ತು 3 ರವರ ಹೆಸರಿನಲ್ಲಿ ದಾವಾ ಅಸ್ತಿ ದಾಖಲು ಮಾಡಿಸಿದ್ದಾರೆ ನನಗೆ ಗೊತ್ತಿಲ್ಲಾ. ದಾವಾ ಅಸ್ತಿಯಲ್ಲಿ ಪ್ರತಿವಾದಿ 8 ರವರಿಗೂ ಭಾಗ ಇದ್ದುದ್ದರಿಂದ ಭಾಗ ಕೇಳಿದ್ದಾರೆ ಅಂದರೆ ಸಾಕ್ಷಿಯು ನನಗೆ ಗೊತಿಲ್ಲಾ ಎಂದು ಹೇಳುತ್ತಾರೆ. ನಾನು ದಾವಾ ಆಸ್ತಿಯಲ್ಲಿ ಅರ್ಧ ಪಾಲು ಕೇಳಲು ಹಕ್ಕು ಇಲ್ಲಾ ಅಂದರೆ ಸರಿಯಲ್ಲ. ಬಂಡೆಪ್ಪರವರಿಗೆ ಇರುವ ಇನ್ನೊಬ್ಬ ಮಗಳು ಕಲ್ಲಮ್ಮಾರವರಿಗೆ 3 ಜನ ಹೆಣ್ಣು ಮಕ್ಕಳು 2 ಜನ ಗಂಡು ಮಕ್ಕಳು ಇದ್ದಾರೆ. ಅವರ ಹೆಸರು ಶಂಕರ, ಶಾಂತರಾಜ, ಕಮಲಮ್ಮಾ ಚೆನ್ನಮ್ಮಾ ಮತ್ತು ಶಾರದಾ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಪ್ರ.ಹಿ ಸಿವಿಲ್ ಜಡ್ಜ & ಸಿ. ಜೆ.ಎಮ್
ನ್ಯಾಯಾಧೀಶರು, ಬೀದರ್.